# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | |
|---|---|
| ಸಂಖ್ಯೆ: ಬಿ12(ಸಿ1)ಪಿಆರ್/38/17-18 | ಇವರಿಗೆ, |
| ದಿನಾಂಕ: 20/06/18 | ವಲಯ ಅಪರ / ಜಂಟಿ ಆಯುಕ್ತರುಗಳಿಗೆ |
| ಅಪರ ಆಯುಕ್ತರು (ಆಡಳಿತ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೆಂಗಳೂರು. |

## ಆಂತರಿಕ ಕಛೇರಿ ಟಿಪ್ಪಣಿ

ವಿಷಯ: ಪಾಲಿಕೆಯ ಅಧಿಕಾರಿ / ನೌಕರರುಗಳ ವೇತನವನ್ನು ಆಧಾರ್ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ಮೂಲಕ ಪಾವತಿಸುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ ನೌಕರರುಗಳ ಸಮಯ ಪಾಲನೆ ಹಾಗೂ ಶಿಸ್ತನ್ನು ಹೆಚ್ಚಿಸಲು Aadhaar Based ಬಯೋಮೆಟ್ರಿಕ್ ಸಿಸ್ಟಮ್‌ನಲ್ಲಿ ಅಳವಡಿಸಿ ಹಾಜರಾತಿಯನ್ನು ದಾಖಲಿಸಿ ಅಧಿಕಾರಿ ನೌಕರರುಗಳ ವೇತನವನ್ನು ಈ ಮೂಲಕ ಪಾವತಿಸಲು ಈಗಾಗಲೇ ಈ ಕಛೇರಿಯಿಂದ ಅನೇಕ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ. ಆದಾಗ್ಯೂ Aadhaar Based ಬಯೋಮೆಟ್ರಿಕ್ ವ್ಯವಸ್ಥೆಯನ್ನು ಅಳವಡಿಸಿ ಹಾಜರಾತಿಯನ್ನು ದಾಖಲಿಸಿ ಅಧಿಕಾರಿ ನೌಕರರುಗಳ ವೇತನವನ್ನು ಪಾವತಿಸುವ ಪ್ರಗತಿಯ ಬಗ್ಗೆ ಪರಿಶೀಲಿಸಲಾಗಿ, Aadhaar Based ಬಯೋಮೆಟ್ರಿಕ್ ಹಾಜರಾತಿಯನ್ನು ಯಾವುದೇ ಕಛೇರಿಯಲ್ಲಿ ಸಮರ್ಪಕವಾಗಿ ನಿರ್ವಹಿಸದೆ ಇರುವುದು ಕಂಡುಬಂದಿರುತ್ತದೆ.

ಈ ಸಂಬಂಧ, ಈ ಹಿಂದೆ ನೀಡಿರುವ ಸೂಚನೆಗಳಂತೆ ಇನ್ನು ಮುಂದೆ ಪ್ರತಿಯೊಬ್ಬ ಅಧಿಕಾರಿ / ಸಿಬ್ಬಂದಿಗಳು ನಿಗಧಿತ ಸಮಯದಲ್ಲಿ ಕಛೇರಿಗೆ ಹಾಜರಾಗಿ ಕಾರ್ಯನಿರ್ವಹಿಸ ಬೇಕಾಗಿರುವ ಹಿನ್ನೆಲೆಯಲ್ಲಿ ಬಯೋಮೆಟ್ರಿಕ್ ಹಾಜರಾತಿ ತಂತ್ರಾಂಶವನ್ನು ನಿರ್ವಹಿಸುತ್ತಿರುವ ಮಾಹಿತಿ ತಂತ್ರಜ್ಞಾನ ಇಲಾಖೆ (ಕೇಂದ್ರ) ಕಛೇರಿಯ ಸಹಕರದೊಂದಿಗೆ ಈಗಾಗಲೇ ಅಳವಡಿಸಿಕೊಂಡಿದ್ದಲ್ಲಿ ಹಾಜರಾತಿಯನ್ನು ಕಡ್ಡಾಯಗೊಳಿಸುವುದು ಒಂದು ವೇಳೆ ಬಯೋಮೆಟ್ರಿಕ್ ಯಂತ್ರಗಳನ್ನು ಅವಳಡಿಸಿಕೊಳ್ಳದೇ ಇದ್ದಲ್ಲಿ, ತಮ್ಮ ವ್ಯಾಪ್ತಿಯಲ್ಲಿಯೇ ಮಾಹಿತಿ ತಂತ್ರಜ್ಞಾನ ಇಲಾಖೆ ಕೇಂದ್ರ ಕಛೇರಿಯ ಸಹಕರದೊಂದಿಗೆ ಬಯೋಮೆಟ್ರಿಕ್ ಯಂತ್ರಗಳನ್ನು ಅಳವಡಿಸಿಕೊಂಡು ಅಧಿಕಾರಿ / ಸಿಬ್ಬಂದಿಗಳ ಹಾಜರಾತಿಯನ್ನು ದಿನಾಂಕ: 01-01-2018 ರಿಂದ ಜಾರಿಗೆ ಬರುವಂತೆ ಕಡ್ಡಾಯಗೊಳಿಸಬೇಕಾಗಿ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕ್ರಮಕೈಗೊಳ್ಳಲು ಸೂಚಿಸಬೇಕಾಗಿ ತಿಳಿಯಪಡಿಸಿದೆ.

ವಲಯ ವ್ಯಾಪ್ತಿಯಲ್ಲಿ Aadhaar Based Biometric Fingerprint Authenticator ಯಂತ್ರದಲ್ಲಿ ಹಾಜರಾತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಈ ಕೆಳಗೆ ತಿಳಿಸಲಾಗಿರುವ ನಮೂನೆಯ ಪ್ರಕಾರ ಮಾಹಿತಿಗಳನ್ನು ಮಾಹಿತಿ ತಂತ್ರಜ್ಞಾನ ಇಲಾಖೆಗೆ Hard Copy / Soft Copy ರೂಪದಲ್ಲಿ ಮಾಹಿತಿಯನ್ನು bbmpit@gmail.comವಿಳಾಸಕ್ಕೆ ಭಾವಚಿತ್ರದೊಂದಿಗೆ ತಂತ್ರಾಂಶದಲ್ಲಿ ದಿನಾಂಕ: 27-06-2018 ರೊಳಗಾಗಿ ನೀಡುವಂತೆ ಸೂಚಿಸಲಾಗಿದೆ. ತಪ್ಪಿದಲ್ಲಿ ಅಧಿಕಾರಿ / ಸಿಬ್ಬಂದಿವರ್ಗದವರುಗಳ ವೇತನವನ್ನು ಜುಲೈ ಮಾಹೆಯಿಂದ ತಡೆಹಿಡಿಯಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

| Sl.No | Name of the employee | Designation | Department & DDO Code | Employee ID Number and Gender | Full Aadhaar Number | Mobile Number | Employee Type | Date of Birth | Pass Port Size Photograph |
|---|---|---|---|---|---|---|---|---|---|
| 1 | | | | | | | | | |

ಅಪರ ಆಯುಕ್ತರು (ಆಡಳಿತ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ